## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ದಿನಾಂಕಃ 05.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಡಿ.ಎನ್.ಆರ್. ವಕೀಲರಿಂದಃ**

**1.** ನನ್ನ ತಂದೆಯ ಹೆಸರು ವೆಂಕಟಪ್ಪ @ ಜಬರಪ್ಪ ಎಂದರೆ ನಿಜ. ನನ್ನ ತಾಯಿಯ ಹೆಸರು ಮುನಿಯಮ್ಮ ಅಂದರೆ 1 ನೇ ವಾದಿ ಎಂದರೆ ನಿಜ. ನನ್ನ ತಂದೆಗೆ ನಾವು 4 ಜನ ಮಕ್ಕಳು. ಅವರೆಂದರೆ 2 ರಿಂದ 4 ನೇ ವಾದಿಯರು ಮತ್ತು ನಾನು ಆಗಿದ್ದೇವೆ ಎಂದರೆ ನಿಜ. ನನಗೆ ಈಗ ಸುಮಾರು 75 ವರ್ಷ ವಯಸ್ಸು. ನಾನು ಹುಟ್ಟಿದ್ದು ಮತ್ತು ಬೆಳೆದಿದ್ದು ಹೊಸಕೋಟೆ ತಾಲ್ಲೂಕಿನ ಆಲಪ್ಪನಹಳ್ಳಿಯಲ್ಲಿ ಎಂದರೆ ನಿಜ. ನನ್ನ ಮತ್ತು ನನ್ನ ಅಣ್ಣ 2 ನೇ ವಾದಿಯ ಮದುವೆಯು ಒಂದೇ ದಿನ ಆಲಪ್ಪನಹಳ್ಳಿಯಲ್ಲಿ ಆಗಿತ್ತು ಎಂದರೆ ನಿಜ. ನನ್ನ ಮದುವೆಯು ಅಶ್ವಥಕಟ್ಟೆಯ ಬಳಿ ಆಗಿತ್ತು ಮತ್ತು ನನ್ನ ಅಣ್ಣನ ಮದುವೆಯು ಮನೆಯ ಮುಂದೆ ಚಪ್ಪರ ಹಾಕಿ ಮಾಡಲಾಗಿತ್ತು. ಆ ರೀತಿ ಮದುವೆಯು ಒಂದೇ ಕಡೆ ಮಾಡಿದರೆ ಏಳು ಬೀಳು ಆಗುತ್ತದೆ ಎಂದು ಬೇರೆ ಬೇರೆ ಕಡೆ ಮಾಡಿದ್ದರು ಎಂದರೆ ಅದು ನನ್ನ ತಂದೆಗೆ ಗೊತ್ತು ನನ್ನ ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮಿಬ್ಬರ ಮದುವೆಯ ಊಟ ಒಂದೇ ಜಾಗದಲ್ಲಿ ಏರ್ಪಡಿಸಲಾಗಿತ್ತು ಎಂದರೆ ನಿಜ. ನನ್ನ ಮತ್ತು ನನ್ನ ಅಣ್ಣನ ಮದುವೆಯು ನನ್ನ ತಂದೆ-ತಾಯಿಯ ಆಶಿರ್ವಾದದಿಂದ ಆಗಿತ್ತು ಎಂದರೆ ನಿಜ.

**2.** ನನ್ನ ತಂಗಿ ಶಾರದಮ್ಮನ ಗಂಡನ ಹೆಸರು ನನಗೆ ಗೊತ್ತಿಲ್ಲ. ಆಕೆಯ ಗಂಡನ ಹೆಸರು ಕೃಷ್ಣಪ್ಪ ಎಂದರೆ ಗೊತ್ತಿಲ್ಲ. ಸದರಿ ಕೃಷ್ಣಪ್ಪ ನನ್ನ ತಮ್ಮ 3 ನೇ ವಾದಿ ಸೀನಪ್ಪನ ಜೊತೆ ವ್ಯಾಪಾರ ಮಾಡಿಕೊಂಡು ನಮ್ಮ ಮನೆಯಲ್ಲಿಯೇ ಇದ್ದ ಎಂದರೆ ಸರಿಯಲ್ಲ. ಆ ರೀತಿ ಆತ 4-5 ವರ್ಷ ನಮ್ಮ ಮನೆಯಲ್ಲಿ ಇದ್ದ ಕಾರಣ ಆತ ಒಳ್ಳೆಯ ವ್ಯಕ್ತಿ ಎಂದು ನಮ್ಮ ಮನೆಯವರೆಲ್ಲರೂ ಆತನ ಜೊತೆ ನನ್ನ ತಂಗಿಯ ಮದುವೆ ನಿಶ್ಚಯ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕೃಷ್ಣಪ್ಪನ ಸಹೋದರಿಯು ಅನ್ಯಕೋಮಿನ ಹುಡುಗನ ಜೊತೆ ಮದುವೆಯಾಗಿದ್ದಾನೆ ಎಂದು ಆತನಿಗೆ ನನ್ನ ತಂಗಿಯನ್ನು ಕೊಡಬಾರದು ಎಂದು ವಿರೋಧ ಮಾಡಿದ್ದೆ ಎಂದರೆ ಸರಿಯಲ್ಲ. ನಂತರ ಪಂಚಾಯ್ತಿಯಾಗಿತ್ತು ಮತ್ತು ಪಂಚಾಯ್ತಿಯ ಬಳಿಕ ನನ್ನ ತಂಗಿಯ ಮದುವೆಯು ಕಾಟಮ್ಮನಲ್ಲೂರಿನಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಆತನ ಜೊತೆ

ಮಾಡಲಾಗಿತ್ತು ಎಂದರೆ ಗೊತ್ತಿಲ್ಲ. ಆ ಮದುವೆಯು ನನ್ನ ತಂದೆ-ತಾಯಿ ಮತ್ತು ಸಹೋದರರು ಸೇರಿ ಒಪ್ಪಿಗೆ ಸೂಚಿಸಿ ಮದುವೆ ಮಾಡಿದ್ದರು ಎಂದರೆ ಸರಿಯಲ್ಲ. ನಾವು ಯಾರು ಮದುವೆಗೆ ಹೋಗಿರಲಿಲ್ಲ ಎಂದು ಹೇಳುತ್ತಾರೆ. ನಾವು 4 ಜನ ಸಹೋದರರ ಪೈಕಿ 3 ನೇ ವಾದಿಯ ಮದುವೆಯು ಮೊದಲು ಆಗಿತ್ತು ಎಂದರೆ ನಿಜ. ಎರಡನೆಯದಾಗಿ ನನ್ನ ಸಹೋದರಿ ಶಾರದಮ್ಮನ ಮದುವೆಯಾಗಿತ್ತು ಎಂದರೆ ಗೊತ್ತಿಲ್ಲ. ಶಾರದಮ್ಮನ ಮದುವೆಯ ನಂತರ ನನ್ನ ಮತ್ತು ನನ್ನ ಅಣ್ಣ 2 ನೇ ವಾದಿಯ ಮದುವೆಯಾಗಿತ್ತು ಎಂದರೆ ನಿಜ. ನಾವು ಮೂರು ಜನ ಗಂಡು ಮಕ್ಕಳ ಪೈಕಿ ನಾನೇ ಬುದ್ಧಿವಂತ ಎಂದರೆ ಸರಿಯಲ್ಲ. ನಾನು ಬುದ್ಧಿವಂತನಾಗಿದ್ದ ಕಾರಣ ನಮ್ಮ ಮನೆಯ ಕಷ್ಟ-ಸುಖ ನಾನೆ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಯಜಮಾನಿಕೆ ಸಹ ನಾನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸಕೋಟೆ.**